

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬನೂ ನಧೀರ್ ಘಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–06–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬನೂ ನಧೀರ್ ವಿರುದ್ಧ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ನಧೀರ್ ಗೋತ್ರದ ಕೋಟೆಯ ಕಡೆಗೆ ಹೊರಟಾಗ ಮದೀನದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಅಬ್ದುಲ್ಲಾ ಬಿನ್ ಮಕ್‌ತೂಮ್(ರ)ರನ್ನು ಇಮಾಮುಸ್ಸಲಾತ್ ಆಗಿ ನೇಮಿಸಿದ್ದರು. ಹಝ್ರತ್ ಪೈಗಂಬರ್(ಸ) ಸ್ವತಃ ಸಹಾಬರ ಒಂದು ಗುಂಪಿನೊಂದಿಗೆ ಮದೀನದಿಂದ ಹೊರಟು ಬನೂ ನಧೀರ್ ಗೋತ್ರದ ಕೋಟೆಗೆ ಮುತ್ತಿಗೆ ಹಾಕಿದರು. ಆ ಕಾಲದ ಯುದ್ಧ ರೀತಿ ಪ್ರಕಾರ ಬನೂ ನಧೀರ್ ತಮ್ಮ ಕೋಟೆಯೊಳಗೆ ಇದ್ದರು. ಆ ಸಂದರ್ಭದಲ್ಲಿ ಅಬ್ದುಲ್ಲಾ ಬಿನ್ ಉಬಯ್ ಬಿನ್ ಸುಲೂಲ್ ಮತ್ತು ಇತರ ಮದೀನದ ಕಪಟ ವಿಶ್ವಾಸಿಗಳು ಬನೂ ನಧೀರ್‌ನ ಮುಖಂಡರಿಗೆ ಹೀಗೆ ತಿಳಿಸಿದ್ದರು. ನೀವು ಮುಸ್ಲಿಮರ ಎದುರಿಗೆ ಶರಣಾಗಬೇಡಿರಿ. ನಾವು ನಿಮಗೆ ಬೆಂಬಲ ನೀಡುವೆವು ಮತ್ತು ನಿಮ್ಮೊಂದಿಗೆ ಸೇರಿ ಹೋರಾಡುವೆವು. ಆದರೆ ಯುದ್ಧ ಪ್ರಾರಂಭವಾದಾಗ ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಕ್ಷೇತ್ರದಲ್ಲಿ ಪ್ರವೇಶಿಸಲು ಧೈರ್ಯ ಹೊಂದಲಿಲ್ಲ. ಬನೂ ಖುರೈಝ ಎಂಬ ಯಹೂದಿ ಗೋತ್ರ ಸಹ ಮುಸ್ಲಿಮರ ವಿರುದ್ಧ ಬನೂ ನಧೀರ್‌ಗೆ ಸಹಾಯಕರಾಗಿ ಹೋರಾಟಕ್ಕಿಳಿಯಲು ಧೈರ್ಯಪಡಲಿಲ್ಲ.

ಬನೂ ನಧೀರ್ ಗೋತ್ರದವರು ಕೋಟೆಯಿಂದ ಹೊರಗೆ ಬಂದು ಹೋರಾಡಲು ಸಿದ್ಧರಾಗದೆ ಕೋಟೆಯೊಳಗೆಯೇ ಇದ್ದರು. ಅವರ ಕೋಟೆ ಆ ಕಾಲಕ್ಕೆ ಅನುಸಾರವಾಗಿ ಬಹಳ ಬಲಿಷ್ಠವಾಗಿತ್ತು. ಆದುದರಿಂದ ಅವರಿಗೆ ಧೈರ್ಯವಿತ್ತು ಮುಸ್ಲಿಮರು ತಮಗೆ ಹಾನಿಯನ್ನುಂಟುಮಾಡಲು ಶಕ್ತರಾಗಲಾರರು ಹಾಗೂ ಕೋಟೆಯೊಳಗೆ ನುಗ್ಗಲು ಸಾಧ್ಯವಾಗದೆ ಮುಸ್ಲಿಮರು ಮುತ್ತಿಗೆಯಿಂದ ಹಿಂದೆ ಸರಿಯುವರು ಎಂದು ಅವರು ಭಾವಿಸಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಮುತ್ತಿಗೆಯನ್ನು ಮುಂದುವರಿಸಿದರು. ಅದು ಆರು ದಿನಗಳ ತನಕ ಮುಂದುವರಿಯಿತು ಎಂದೂ ಇನ್ನೊಂದು ವರದಿ ಪ್ರಕಾರ ಹದಿನೈದು ದಿನಗಳ ತನಕ ಮುಂದುವರಿಯಿತು ಎಂದೂ ಮತ್ತೊಂದು ವರದಿ ಪ್ರಕಾರ 20–23 ದಿನಗಳ ವರೆಗೆ ಮುಂದುವರಿಯಿತೆಂದೂ ಹೇಳಲಾಗಿದೆ.

ಕೆಲವು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಕೋಟೆಯ ಹೊರಗಿದ್ದ ಖರ್ಜೂರದ ಮರಗಳಲ್ಲಿ ಕೆಲವು ಮರಗಳನ್ನು ಕಡಿದು ಹಾಕಲು ಆಜ್ಞಾಪಿಸಿದರು. ಅದು ಲೀನ ಎಂಬ ಭಕ್ಷ್ಯ ಯೋಗ್ಯವಲ್ಲದ ಖರ್ಜೂರದ ಮರಗಳಾಗಿದ್ದುವು. ಯಹೂದಿಯರು ಆ ಮರಗಳನ್ನು ತಮಗೆ ಮರೆಯಾಗುವಂತೆ ಮಾಡಿ ಕೋಟೆಯ ಗೋಡೆಗಳ ಮೇಲಿನಿಂದ ಬಾಣಗಳನ್ನೂ ಕಲ್ಲುಗಳನ್ನೂ ವರ್ಷಿಸುತ್ತಿದ್ದರು. ಆದುದರಿಂದ ಹಝ್ರತ್ ಪೈಗಂಬರ್(ಸ)ರು ಆ ಮರಗಳನ್ನು ಕಡಿಯಲು ಆಜ್ಞೆ ನೀಡಿದರು. ಆ ಮೂಲಕ ಯಹೂದಿಯರು ಪ್ರಭಾವಿತರಾಗಿ ಕೋಟೆಯ ಬಾಗಿಲು ತೆರೆಯಲಿ ಎಂದು ಉದ್ದೇಶಿಸಲಾಗಿತ್ತು. ಕೆಲವು ಮರಗಳನ್ನು ಕಡಿದು ಹಾಕುವುದರಿಂದ ಅನೇಕ ಜನರ ಜೀವ ಹಾನಿಯನ್ನು ತಡೆಯುವುದು ಮತ್ತು ದೇಶದಲ್ಲಿ ಅಸ್ತವ್ಯಸ್ತತೆ ಮತ್ತು ಕಲಹಗಳನ್ನು ನಿವಾರಿಸುವುದು ಹಝ್ರತ್ ಪೈಗಂಬರ್(ಸ)ರ ಉದ್ದೇಶವಾಗಿತ್ತು.

ಅಲ್ಲಾಹನ ವಿಶಿಷ್ಟ ಸಂದೇಶವಾಣಿಯ ಪ್ರಕಾರ ಹಝ್ರತ್ ಪೈಗಂಬರ್(ಸ)ರು ಆ ಮರಗಳನ್ನು ಕಡಿಯಲು ಆಜ್ಞೆ ನೀಡಿದ್ದಾರೆಂದು ತಿಳಿಯುತ್ತದೆ. ಈ ಕ್ರಮದಿಂದ ಪ್ರಯೋಜನವಾಯಿತು. ಆರು ಮರಗಳನ್ನು ಕಡಿದಾಗ ಬನೂ ನಧೀರ್ ಪ್ರಾಯಶಃ ಯೋಚಿಸಿದರು ಮುಸ್ಲಿಮರು ಎಲ್ಲ ಮರಗಳನ್ನೂ ಕಡಿಯುವರು ಎಂದು. ಆ ಮರಗಳ ಪೈಕಿ ಭಕ್ಷ್ಯ ಯೋಗ್ಯ ಖರ್ಜೂರದ ಮರಗಳೂ ಇದ್ದುವು. ಆಗ ಯಹೂದಿಯರು ಬೊಬ್ಬೆ ಹಾಕಲು ಪ್ರಾರಂಭಿಸಿದರು. ಸಾಮಾನ್ಯ ಪರಿಸ್ಥಿತಿಯಲ್ಲಿ ಶತ್ರುಗಳ ಫಲ ನೀಡುವ ಮರಗಳನ್ನು ಕಡಿಯಲು ಮುಸ್ಲಿಮರಿಗೆ ಅನುಮತಿ ಇರಲಿಲ್ಲ. ಬನೂ ನಧೀರ್ ವಿಚಲಿತರಾಗಿ ಹೀಗೆ ಹೇಳಿದರು: ನಮ್ಮನ್ನು ಕೋಟೆಯಿಂದ ನಮ್ಮ ಸಾಮಗ್ರಿಗಳೊಂದಿಗೆ ಶಾಂತಿಯಿಂದ ಹೋಗಲು ಅನುಮತಿಸುವುದಾದರೆ ನಾವು ಕೋಟೆಯ ಬಾಗಿಲನ್ನು ತೆರೆಯುವೆವು.

ಯಹೂದಿಯರ ಬಲಹೀನತೆ ಮತ್ತು ಅವರು ಸ್ವತಃ ದೇಶಬಿಟ್ಟು ಹೋಗಲು ಅನುಮತಿ ಯಾಚಿಸಿದುದರ ಬಗ್ಗೆ ಹೀಗೆ ಬರೆಯಲಾಗಿದೆ: ಮುಸ್ಲಿಮರು ಅವರ ಮರಗಳನ್ನು ಸುಟ್ಟು ಅವರು ಹೆಚ್ಚು ಗಾಬರಿಗೊಳ್ಳುವಂತೆ ಮಾಡಿದ್ದರು. ಅಲ್ಲಾಹನು ಅವರ ಹೃದಯಗಳಲ್ಲಿ ಹೆದರಿಕೆಯನ್ನು ತುಂಬಿಸಿದನು. ಅವರು ಶರಣಾಗತಿ ಪ್ರಕಟಿಸಲು ನಿರ್ಬಂಧಿತರಾದರು. ದೇಶಬಿಟ್ಟು ಹೋಗಲು ಅನುಮತಿಸಬೇಕೆಂಬ ಯಹೂದಿಯರ ಬೇಡಿಕೆ ಬಗ್ಗೆ ಹಝ್ರತ್ ಪೈಗಂಬರ್(ಸ)ರು ಹೀಗೆ ಆಜ್ಞಾಪಿಸಿದರು: ನೀವು ಮದೀನದಿಂದ ಹೊರಗೆ ಹೋಗುವುದಾದರೆ ನಿಮ್ಮ ಜೀವ ಸುರಕ್ಷಿತವಾಗಿರುವುದು. ನಿಮ್ಮ ಒಂಟೆಗಳನ್ನು ಮತ್ತು ಇತರ ಸಾಮಗ್ರಿಗಳನ್ನು ತೆಗೆದು ಹೋಗಬಹುದು. ಆದರೆ ಆಯುಧಗಳನ್ನು ಸಾಗಿಸಬಾರದು.

ಹಝ್ರತ್ ಪೈಗಂಬರ್(ಸ)ರ ವಿರುದ್ಧ ಆಕ್ಷೇಪ ಮಾಡುವವರು ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ, ಯಹೂದಿಯರು

ಒಪ್ಪಂದವನ್ನು ಭಂಗ ಮಾಡುವವರೂ ಸರಕಾರದ ಮುಖ್ಯಾಧಿಕಾರಿಯಾಗಿದ್ದ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಅನೇಕ ಸಾರಿ ಗೂಢಾಲೋಚನೆಗಳನ್ನೂ ಪ್ರಯತ್ನಗಳನ್ನೂ ಮಾಡಿದವರೂ ಆಯುಧಧಾರಿಗಳಾಗಿ ವಿದ್ರೋಹವನ್ನು ಮಾಡಲು ಸನ್ನದ್ಧರಾದವರೂ ಶಾಂತಿಯ ಪ್ರಸ್ತಾಪವನ್ನು ದುರಹಂಕಾರದಿಂದ ತಿರಸ್ಕರಿಸಿದವರೂ ಆಗಿದ್ದರು. ಅಂತಹ ಯಹೂದಿಯರನ್ನು ಹಿಡಿಗೂಡಬಹುದಾಗಿತ್ತು. ಹಾಗಿದ್ದರೂ ಹಝ್ರತ್ ಪೈಗಂಬರ್(ಸ)ರು ಶಾಂತಿ ಪ್ರಿಯರೂ ಸೌಹಾರ್ದವನ್ನು ಇಚ್ಛಿಸುವವರೂ ಕಾರುಣ್ಯಭರಿತರೂ ಮಾನವರ ಬಗ್ಗೆ ವಾತ್ಸಲ್ಯದ ಅದ್ಭುತ ವೈಭವಶಾಲಿ ಸುಸ್ವಭಾವ ಪ್ರಕಟಿಸುವವರೂ ಆಗಿದ್ದುದರಿಂದ ಅವರು ಆ ಯಹೂದಿಯರನ್ನು ಶಾಂತಿಯಿಂದ ಸುರಕ್ಷಿತರಾಗಿ ಹೊರಟು ಹೋಗಲು ಅನುಮತಿಸಿದರು. ಆಯುಧಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸಾಮಗ್ರಿಗಳನ್ನು ಒಯ್ಯಲು ಅನುಮತಿಸಿದುದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯ ಭರಿತ ನಡೆವಳಿಕೆಯ ಪ್ರತೀಕವಾಗಿದೆ.

ಹಝ್ರತ್ ಪೈಗಂಬರ್(ಸ)ರು ಯಹೂದಿಯರ ಮುಂದೆ ನಾಲ್ಕು ಶರತ್ತುಗಳನ್ನು ಇರಿಸಿದ್ದರು: 1) ಬನೂ ನಧೀರ್ ಗೋತ್ರದ ಯಹೂದಿಯರು ಮದೀನದಿಂದ ಹೊರಗೆ ತಮಗೆ ಇಷ್ಟವಿರುವಲ್ಲಿಗೆ ಹೋಗಬಹುದು. 2) ಆಯುಧಗಳನ್ನು ತೆಗೆದುಕೊಂಡು ಹೋಗಬಾರದು. 3) ತಮಗೆ ಎಷ್ಟು ಸಾಧ್ಯವೋ ಅಷ್ಟೆಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಬಹುದು. 4) ಯಹೂದಿಯರು ತೆಗೆದುಕೊಂಡು ಹೋಗಲು ಸಾಧ್ಯವಾಗದೆ ಬಿಟ್ಟುಹೋದ ಸ್ಥಿರ–ಚರ ಸ್ವತ್ತುಗಳು ಮುಸ್ಲಿಮರ ಅಧೀನಕ್ಕೆ ಬರುವುವು.

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಯಹೂದಿಯರು ಮದೀನ ಬಿಟ್ಟು ಹೊರಟು ಹೋದ ಘಟನೆಯ ಬಗ್ಗೆ ಹೀಗೆ ಬರೆದಿದ್ದಾರೆ: ಬನೂ ನಧೀರ್ ತಮ್ಮ ಮನೆಗಳನ್ನು ಕೆಡವಿ ಹಾಕಿ ಅದರ ಬಾಗಿಲು, ಕಿಟಕಿ ಮೊದಲಾದವುಗಳನ್ನೂ ತೆಗೆದುಕೊಂಡು ಹೋದರು. ಅವರು ಮದೀನದಿಂದ ಹೊರಡುವಾಗ ಹಾಡುತ್ತಾ ಡೋಲು ಬಡಿಯುತ್ತಾ ಮದುವೆ ಮೆರವಣಿಗೆಯ ಹಾಗೆ ಸಂಭ್ರಮದಿಂದ ಹೊರಟಿದ್ದರು. ಆದರೆ ಅವರ ಆಯುಧಗಳು ಮತ್ತು ಸ್ಥಿರ ಸೊತ್ತುಗಳಾದ ತೋಟಗಳು ಮೊದಲಾದುವು ಮುಸ್ಲಿಮರ ಅಧೀನಕ್ಕೆ ಬಂದುವು. ಆ ಸಂಪತ್ತು ಯಾವುದೇ ಯುದ್ಧ ಮಾಡದೆ ಗಳಿಸಿದುದು ಆಗಿದ್ದುದರಿಂದ ಇಸ್ಲಾಮೀ ಶರೀಅತ್ ಪ್ರಕಾರ ಅದನ್ನು ಹಂಚುವ ಅಧಿಕಾರ ಪೂರ್ಣವಾಗಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತ್ತು. ಹಝ್ರತ್ ಪೈಗಂಬರ್(ಸ)ರು ಆ ಸ್ವತ್ತಿನ ಬಹಳ ಹೆಚ್ಚಿನ ಭಾಗ ಬಡ ಮುಹಾಜಿರ್‌ಗಳಿಗೆ ಹಂಚಿದರು. ಅದುವರೆಗೆ ಅವರ ಜೀವನಾಧಾರ ಅನ್‌ಸಾರ್‌ಗಳ ಸ್ವತ್ತನ್ನು ಅವಲಂಬಿಸಿ ಇದ್ದುದರಿಂದ ಪರೋಕ್ಷವಾಗಿ ಅನ್‌ಸಾರ್‌ಗಳಿಗೂ ಆ ಯಹೂದಿಯರಿಂದ ಗಳಿಸಿದ ಸ್ವತ್ತಿನ ಲಾಭ ಲಭ್ಯವಾಯಿತು.

ಬನೂ ನಧೀರ್ ಗೋತ್ರದ ಯಹೂದಿಯರು ಮುಹಮ್ಮದ್ ಬಿನ್ ಮುಸ್ಲಿಮ(ರ) ಎಂಬ ಸಹಾಬಿಯ ಮೇಲ್ವಿಚಾರಣೆಗೆ ಪಾತ್ರರಾಗಿ ಮದೀನದಿಂದ ಹೊರಗೆ ಹೊರಟಾಗ ಹಿಂದೆ ಅನ್‌ಸಾರ್‌ಗಳ ಮಕ್ಕಳಾಗಿದ್ದ ಕೆಲವರು ಹರಕೆ ಪ್ರಕಾರ ಯಹೂದಿಯರಾಗಿ ಪರಿವರ್ತಿತರಾಗಿದ್ದುದರಿಂದ ಆ ನವ ಯಹೂದಿಯರನ್ನು ತಡೆಯಲು ಕೆಲವು ಅನ್‌ಸಾರ್‌ಗಳು ಇಚ್ಛಿಸಿದರು. ಆದರೆ ಅನ್‌ಸಾರ್‌ಗಳ ಈ ಅಪೇಕ್ಷೆ **ಲಾ ಇಕ್ರಾಹ ಫಿದ್ದೀನ್** (ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ) ಎಂಬ ಪವಿತ್ರ ಖುರ್‌ಆನಿನ ಆಜ್ಞೆಗೆ ವಿರುದ್ಧವಾಗಿತ್ತು. ಹಝ್ರತ್ ಪೈಗಂಬರ್(ಸ)ರು ಮುಸ್ಲಿಮರಿಗೆ ವಿರುದ್ಧವಾಗಿ ಮತ್ತು ಯಹೂದಿಯರ ಪರವಾಗಿ ತೀರ್ಪು ನೀಡಿ ಹೇಳಿದರು ಯಹೂದಿಯಾಗಿರುವವನು ಅವರ ಜೊತೆ ಹೋಗಲು ಇಚ್ಛಿಸುವುದಾದರೆ ನಾವು ತಡೆಯುವುದಿಲ್ಲ. ಆದರೆ ಬನೂ ನಧೀರ್ ಗೋತ್ರದಿಂದ ಇಬ್ಬರು ತಮ್ಮ ಸ್ವಂತ ಇಷ್ಟಪ್ರಕಾರ ಮುಸ್ಲಿಮರಾಗಿ ಮದೀನದಲ್ಲಿ ನಿಂತರು.

ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಪೈಗಂಬರ್(ಸ)ರು ಬನೂ ನಧೀರ್ ಬಗ್ಗೆ ಹೀಗೆ ತೀರ್ಪು ನೀಡಿದ್ದರು, ಅವರು ಸಿರಿಯಾ ದೇಶದ ಕಡೆಗೆ ಹೋಗಬೇಕೆಂದು. ಆದರೆ ಅವರ ನಾಯಕರಾಗಿದ್ದ ಸಲಾಮ್ ಬಿನ್ ಅಬಿಲ್ ಹಖೀಖ್, ಕಿನಾನ ಬಿನ್ ರಬೀಅ್, ಹುಬಯ್ಯಿ ಬಿನ್ ಅಖ್‌ತಬ್ ಮೊದಲಾದವರು ಹಾಗೂ ಇತರ ಕೆಲವರು ಹಿಜಾಝಿನ ಉತ್ತರ ಭಾಗದಲ್ಲಿರುವ ಯಹೂದಿಯರ ಖೈಬರ್ ಎಂಬ ಪ್ರಸಿದ್ಧ ಪಟ್ಟಣಕ್ಕೆ ಹೋಗಿ ವಾಸಿಸಲು ತೊಡಗಿದರು. ಖೈಬರಿನವರು ಅವರನ್ನು ಸ್ವಾಗತಿಸಿದರು. ಈ ಜನರು ಕೊನೆಗೆ ಮುಸ್ಲಿಮರ ವಿರುದ್ಧ ಪಿತೂರಿ ಮತ್ತು ರೊಚ್ಚಿಗೆಬ್ಬಿಸುವ ಯುದ್ಧಕ್ಕೆ ಕಾರಣವಾದರು. ಬನೂ ನಧೀರ್ ವಿರುದ್ಧ ಯುದ್ಧವೇ ನಡೆದಿರಲಿಲ್ಲ. ಅಲ್ಲಾಹನು ತನ್ನ ಪೈಗಂಬರರ ಬಗ್ಗೆ ಭಯ ಭೀತಿಯನ್ನು ಬನೂ ನಧೀರ್ ಗೋತ್ರದವರ ಹೃದಯಗಳ ಮೇಲೆ ಆವರಿಸುವಂತೆ ಮಾಡಿದ್ದನು. ಹೀಗೆ ಅಲ್ಲಾಹನು ತನ್ನ ಪೈಗಂಬರರನ್ನು ಅವರ ಸಂಪತ್ತಿನ ವಾರೀಸುದಾರರನ್ನಾಗಿ ಮಾಡಿದನು.

ಅನ್‌ಸಾರ್‌ಗಳ ಅದ್ಭುತಕರವೂ ಅನುಕರಣೀಯವೂ ಆಗಿರುವ ಪ್ರೀತಿ ಮತ್ತು ತ್ಯಾಗಶೀಲತೆಯ ಉದಾಹರಣೆ ಸಹ ನಮಗೆ ಇಲ್ಲಿ ದೊರಕುತ್ತದೆ. ಹಝ್ರತ್ ರಸೂಲ್(ಸ)ರು ಸಂಪತ್ತನ್ನು ಹಂಚುವಾಗ ಹಝ್ರತ್ ಸಾಬಿತ್ ಬಿನ್ ಖೈಸ್ ಬಿನ್ ಶಮಾಸ್(ರ)ರೊಂದಿಗೆ ಹೀಗೆ ಹೇಳಿದರು: ನನ್ನೆದುರಿಗೆ ನಿಮ್ಮ ಕೋಮಿನ ಜನರನ್ನು ಜಮಾಯಿಸಿರಿ. ಎಲ್ಲ ಅನ್‌ಸಾರ್‌ಗಳನ್ನು ಕರೆಯಿರಿ ಎಂದು ಹೇಳಿದರು. ಅವರು ಔಸ್ ಮತ್ತು ಖಝ್ರಜ್ ಗೋತ್ರದವರನ್ನು ಕರೆದರು. ಹಝ್ರತ್ ಪೈಗಂಬರ್(ಸ) ಅನ್‌ಸಾರ್‌ಗಳು ಮಹಾಜಿರ್‌ಗಳೊಂದಿಗೆ ಔದಾರ್ಯಪೂರ್ಣವಾಗಿ ವರ್ತಿಸಿದುದನ್ನು ಪ್ರಸ್ತಾಪಿಸುತ್ತಾ ಹೇಳಿದರು: ನೀವು ಇಚ್ಛಿಸುವುದಾದರೆ ಬನೂ ನಧೀರ್‌ರಿಂದ ಗಳಿಸಿದ ಸಂಪತ್ತನ್ನು ನಿಮ್ಮ ಮತ್ತು ಮುಹಾಜಿರೀನ್‌ಗಳ ಮಧ್ಯೆ ಹಂಚಲಾಗುವುದು. ಆ ಸ್ಥಿತಿಯಲ್ಲಿ ಮುಹಾಜಿರ್‌ಗಳು ನೀವು ಕೊಟ್ಟ ಮನೆಗಳಲ್ಲಿ ವಾಸಿಸುವವರೂ ನಿಮ್ಮ ಸಂಪತ್ತಿನ ವಾರೀಸುದಾರರೂ ಆಗುವರು. ಅಥವಾ ನೀವು ತೃಪ್ತಿಪಡುವುದಾದರೆ ಗಳಿಸಿದ ಸಂಪತ್ತನ್ನು ಮುಹಾಜಿರ್‌ಗಳಿಗೆ ಹಂಚುವೆನು. ಹಾಗೆ ಮಾಡಿದರೆ ಅವರು ನೀವು ಅವರಿಗೆ ನೀಡಿದ ಮನೆಗಳಿಂದ ಹೊರಗೆ ಹೋಗುವರು ಎಂದು ಹೇಳಿದರು. ಆಗ ಹಝ್ರತ್ ಸಅದ್ ಬಿನ್ ಉಬಾದ(ರ) ಮತ್ತು ಹಝ್ರತ್ ಸಅದ್ ಬಿನ್ ಮುಆಝ್(ರ) ಹೇಳಿದರು: ಮುಹಾಜಿರುಗಳ

ಸ್ವಾಧೀನದಲ್ಲಿರುವ ನಮ್ಮ ಸ್ವತ್ತು ಅವರ ಬಳಿಯಲ್ಲೇ ಇರಲಿ ಹಾಗೂ ಬನೂ ನದ್ಹೀರ್‌ನಿಂದ ಗಳಿಸಿದ ಸಂಪತ್ತು ಸಹ ಮುಹಾಜಿರ್ ಸಹೋದರರಿಗೆ ಹಂಚಿಕೊಡಿರಿ.

ಮುಹಾಜಿರ್‌ಗಳಿಂದ ಹೀಗೆ ಶಬ್ದ ಕೇಳಿಸಿತು. ಅವರು ಹೇಳಿದರು: ಹೇ ಅಲ್ಲಾಹನ ರಸೂಲರೇ ನಾವು ನಿಮ್ಮ ತೀರ್ಮಾನದ ಬಗ್ಗೆ ಸಂತೋಷಪಡುತ್ತೇವೆ. ನಾವು ಅದನ್ನು ಅಂಗೀಕರಿಸುತ್ತೇವೆ.

ಹಝ್ರತ್ ಪೈಗಂಬರ್(ಸ)ರು ಅನ್‌ಸಾರ್‌ಗಳ ತ್ಯಾಗ ಮನೋಭಾವವನ್ನು ನೋಡಿ ಸಂತೋಷಗೊಂಡು ಹೇಳಿದರು: ಹೇ ಅಲ್ಲಾಹ್ ಅನ್‌ಸಾರ್‌ಗಳ ಮೇಲೆಯೂ ಅವರ ಮಕ್ಕಳ ಮೇಲೆಯೂ ಕರುಣೆ ದೋರು.

ಬನೂ ನದ್ಹೀರ್‌ಗೆ ಸಂಬಂಧಿಸಿದ ಯುದ್ಧದ ವಿವರಣೆ ಇಲ್ಲಿಗೆ ಮುಗಿಯಿತು. ಮುಂದೆ ಇನ್‌ಶಾ ಅಲ್ಲಾಹ್ ಬೇರೆ ಯುದ್ಧಗಳ ಬಗ್ಗೆ ಪ್ರಸ್ತಾಪಿಸಲಾಗುವುದು.

ಖುತ್‌ಬ ಜುಮುಅದ ಕೊನೆಗೆ ಹುಝೂರ್, ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ, ಪಾಕಿಸ್ಥಾನದಲ್ಲಿ ಸಾಮಾನ್ಯ ಶಾಂತಿ ಮತ್ತು ಸಂರಕ್ಷೆಯ ಸ್ಥಾಪನೆಗೋಸ್ಕರ ಮತ್ತು ಲೋಕದ ಎಲ್ಲ ಮುಸ್ಲಿಮರಿಗೋಸ್ಕರ ಲೋಕದ ಸಾಮಾನ್ಯ ಸ್ಥಿತಿ ಉತ್ತಮಗೊಳ್ಳಲಿಕ್ಕೋಸ್ಕರ ಪ್ರಾರ್ಥಿಸಲು ಹೇಳಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak'**, Islamabad, Tilford, UK.* On 28-06-2024

**Summarized by** *Majlis Ansarullah Bharat*

***Kannada Translation**:* M.Udeidullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon